ಕಾರ್ಯಕ್ಷೇತ್ರದಲ್ಲಿ ಕಿರಿಕಿರಿ ಅನ್ನುವ ಕಾರಣಕ್ಕೆ ಕೆಲಸ ಬದಲಿಸಿದ ತಕ್ಷಣ ಸಮಸ್ಯೆ ಪರಿಹಾರವಾಗುವುದಿಲ್ಲ. ಇದ್ದ ಕಡೆಯೇ ಚಂದದ ವಾತಾವರಣ ನಿರ್ಮಿಸಿಕೊಳ್ಳಬೇಕು.

# ಕಿರಿಕಿರಿ ಕಾಯಕ ಬದಲಾವಣೆಯೇ ಮದ್ದಲ್ಲ

■ಶುಭಾ ವಿಕಾಸ್

ನಿಮ್ಮ ಮಟ್ಟಿಗೆ ನೀವು ಶ್ರಮಜೀವಿಯೇ. ಪ್ರಾಮಾಣಿಕವಾಗಿಯೇ ಕೆಲಸ ಮಾಡುತ್ತೀರಿ. ಆದರೆ ಅದಕ್ಕೆ ಪ್ರತಿಫಲ ಮಾತ್ರ ಸಿಗುವುದಿಲ್ಲ. ಕಚೇರಿ ಕೆಲಸದಲ್ಲಿ ಪದೇಪದೆ ಕೈ ಕೊಡುವ ಅದೃಷ್ಟ, ಮೇಲಿಂದ ಮೇಲೆ ಮೇಲಧಿಕಾರಿಯ ಅವಮಾನಕ್ಕೆ ಸೋತು ಸುಣ್ಣವಾಗುತ್ತೀರಿ. ಕೊನೆಗೆ ವಿಪರೀತ ಕಿರಿಕಿರಿ ಅಂದೆನಿಸಿ ಅಸಾಧ್ಯ ಅನ್ನುವ ಮಟ್ಟಿಗೆ ನಿಮ್ಮ ಕೆಲಸದ ವಾತಾವರಣ ಅಹಿತವಾಗಿ ಕಾಡುತ್ತದೆ.

ಹಾಗಂತ ಅಂತಹದ್ದೊಂದು ಕಾರ್ಯಕ್ಷೇತ್ರದಿಂದ ಹೊರ ಬಂದಾಕ್ಷಣ ನಿಮ್ಮ ಸಮಸ್ಯೆ ಬಗೆಹರಿಯುತ್ತದೆ ಅಂತೇನೂ ಅಲ್ಲ, ಇನ್ಯಾವುದೋ ಕಂಪನಿ ಸೇರುತ್ತೀರ. ಅಲ್ಲೂ ಅಂಥದ್ದೇ ಅವಮಾನ, ಕಿರಿಕಿರಿ. ಹೀಗೆ ಎಷ್ಟು ವರ್ಷ ಅಂತ ಒಂದಾದ ಮೇಲೊಂದು ಕಂಪನಿ ಬದಲಾಯಿಸಲು ಸಾಧ್ಯ?

ಯಾವುದೇ ಕಂಪನಿ ಸೇರಿದರೂ ಇಂಥದ್ದೇ ಅನುಭವ ಆಗುತ್ತದೆ ಅಂತಾದ ಮೇಲೆ ಅದಕ್ಕೆ ಕೇವಲ ನಿಮ್ಮ ಸಹೋದ್ಯೋಗಿ ಅಥವಾ ಮೇಲಧಿಕಾರಿಯೇ ಕಾರಣವಲ್ಲ. ಯಾರನ್ನೋ ದೂಷಿಸುವ ಬದಲು ನಿಮ್ಮ ದೌರ್ಬಲ್ಯ ಹಾಗೂ ಸಾಮರ್ಥ್ಯ ಏನು ಎಂಬುದನ್ನು ಮೊದಲು ಕಂಡುಕೊಳ್ಳಿ, ನಿಮ್ಮಲ್ಲಿರುವ ನಕಾರಾತ್ಮಕ ಗುಣ ಅಥವಾ ಕೌಶಲ ಕೊರತೆಯೇ ನಿಮ್ಮನ್ನು ಸಮಸ್ಯೆಗೆ ಸಿಲುಕಿಸಬಹುದು. ಪದೇಪದೆ ಅವಮಾನಿಸಬಹುದು.

ಕೆಲಸದ ವಾತಾವರಣ ಪೂರಕವಾಗಿಲ್ಲ ಅಂತಾದರೆ ಅದು ನಿಮ್ಮ ಕೆಲಸದ ಮೇಲೆ ಪ್ರಭಾವ ಬೀರುತ್ತದೆ ಅನ್ನುವುದೇ ಸತ್ಯ. ಆದರೆ ನಿಮ್ಮ ಸುತ್ತ ಚಂದದ ವಾತಾವರಣ ಸೃಷ್ಟಿಸಿಕೊಳ್ಳುವುದು ನಿಮ್ಮ ಕೈಯಲ್ಲೂ ಇದೆ ಅನ್ನುವುದನ್ನು ಮರೆಯಬೇಡಿ.

**ಶ್ರಮ, ಪ್ರಾಮಾಣಿಕತೆ ಕೊನೆತನಕ :** ಕೆಲಸದ ಸ್ಥಳ ಅಂದ ಮೇಲೆ ಹಲವಾರು ಬಗೆಯ ವ್ಯಕ್ತಿಗಳು ನಿಮ್ಮ ಸಂಪರ್ಕಕ್ಕೆ ಬರುತ್ತಾರೆ. ಆದರೆ ಸಕಾರಾತ್ಮಕ ಸಂಬಂಧ ನಿಮ್ಮ ಹಾಗೂ ನಿಮ್ಮ ಸಹೋದ್ಯೋಗಿ ನಡುವೆ ಹುಟ್ಟಬೇಕು. ನೀವು ನೀವಾಗೇ ಇರಬೇಕು. ಹಾಗಂತ ಅದು ಕಚೇರಿ ವಾತಾವರಣಕ್ಕೆ ವ್ಯತಿರಿಕ್ತವಾಗಿ ಇರಬಾರದು.

ಆಫೀಸ್ ವಾತಾವರಣದಲ್ಲಿ ನಿಮ್ಮ ಕೆಲಸದ ಜತೆ ವರ್ತನೆಯೂ ಬದಲಾಗಬೇಕು. ಹಾಗಂತ ಸಖಾಸುಮ್ಮನೆ ಮಾತು, ಹೊಗಳಿಕೆಯಿಂದ ಬಾಸ್‌ನ ಇಂಪ್ರೆಸ್ ಮಾಡುವುದಲ್ಲ, ನಿಮ್ಮ ಉತ್ತಮ ನಡತೆ ಹಾಗೂ ಗುಣಮಟ್ಟದ ಕೆಲಸದಿಂದ ಮಾತ್ರ.

ನಿಮ್ಮ ಸಮರ್ಥ ಕೆಲಸದ ಜತೆ ನಿಮ್ಮ ಶಿಸ್ತು, ಜನರೊಂದಿಗೆ ಬೆರೆಯುವ, ಸದಾ ಪ್ರಸನ್ನವಾಗಿರುವ ನಿಮ್ಮ ಮಾತು, ವರ್ತನೆ ಕೂಡ ನಿಮ್ಮ ಕೆಲಸದ ತೃಪ್ತಿ ಹಾಗೂ ಕೆರಿಯರ್ ವೃದ್ಧಿಗೊಳ್ಳಲು ಮುಖ್ಯ ಪಾತ್ರ ವಹಿಸುತ್ತದೆ.

ಯಾವತ್ತಿದ್ದರೂ ನಿಮ್ಮನ್ನು ಕಾಯುವುದು ಮೇಲಕ್ಕೆತ್ತಿ ನಿಲ್ಲಿಸುವುದು ನಿಮ್ಮ ಪ್ರಾಮಾಣಿಕತೆ ಹಾಗೂ ಕಠಿಣ ಪರಿಶ್ರಮ ಮಾತ್ರ. ಅದೇ ನಂಬಿಕೆಯ ಮೇಲೆ ಕಾರ್ಯ ನಿರ್ವಹಿಸಿ. ಉತ್ತಮ ಫಲಿತಾಂಶ ತಕ್ಷಣ ಸಿಗದಿದ್ದರೂ ನಿಧಾನವಾಗಿ ನಿಮಗೇ ಗೊತ್ತಿಲ್ಲದೆ ನಿಮಗೊಂದು ಐಡೆಂಟಿಟಿ ಸಿಕ್ಕಿರುತ್ತದೆ. ನಂಬಿಕೆಗೆ ಅರ್ಹ ನೌಕರ ಎಂಬ ಗೌರವ ಕೂಡ ನಿಮ್ಮನ್ನು ದೂಷಿಸಿದ್ದ ಮೇಲಧಿಕಾರಿಯ ಮಾತಲ್ಲೇ ಬರುತ್ತದೆ ಅಂದರೆ ಅದಕ್ಕಿಂತ ಖುಷಿ ಸಂಗತಿ ಬೇಕಾ ನಿಮಗೆ. ಇಷ್ಟೆಲ್ಲ ಸ್ಥಾನಮಾನ ನಿಮ್ಮದಾಗಬೇಕು ಅಂದರೆ ಹತ್ತು ಬಾರಿ ಸೋಲಬೇಕು. ಹನ್ನೊಂದನೆಯದ್ದು ಮಾತ್ರ ಗೆಲುವಿನ ದಾರಿಯೇ ಆಗಿರುತ್ತದೆ. ಅದನ್ನು ಹಾಗೆ ಉಳಿಸಿಕೊಂಡು ಹೋಗುವುದು ಮಾತ್ರ ನಿಮಗೆ ಬಿಟ್ಟದ್ದು ●



> ಕಾರ್ಯಕ್ಷೇತ್ರ ಬದಲಿಸಿದ ತಕ್ಷಣ ಸಮಸ್ಯೆ ಪರಿಹಾರವಾಗುವುದಿಲ್ಲ. ಸಮಸ್ಯೆಯ ಮೂಲ ಅರಿಯಿರಿ. ಏಕೆಂದರೆ ನಿಮ್ಮ ವ್ಯಕ್ತಿತ್ವದಲ್ಲೇ ದೋಷ ಇದ್ದರೆ ನೀವು ಕೆಲಸ ಬದಲಿಸಿದಷ್ಟು ಬಾರಿ ಇಂಥದ್ದೇ ಸಮಸ್ಯೆ ಎದುರಿಸುತ್ತೀರಿ. ಅದರ ಬದಲಿಗೆ ನೀವು ಇರುವ ವಾತಾವರಣ ವನ್ನೇ ಸುಂದರವಾಗಿಸುವ ಪ್ರಯತ್ನ ಮಾಡಿ. ಕಾದು ನೋಡುವ ತಾಳ್ಮೆ ಇರಲಿ. ಅಸಾಧ್ಯ ಅಂದಾಗ ಹೊರಬನ್ನಿ.
>
> **- ಜಿ.ಬಿ. ರಾಜು**
> ಆಪ್ತ ಸಲಹೆಗಾರ

- ಸಾಧ್ಯವಾದಷ್ಟು ನಿಮ್ಮನ್ನು ನೀವು ತೆರೆದುಕೊಳ್ಳಿ. ಅಂದರೆ ಮೋಸ, ಅಪ್ರಾಮಾಣಿಕತೆ ನಿಮ್ಮ ಸಮೀಪ ಸುಳಿಯದಿರಲಿ.
- ಇತರ ಸಹೋದ್ಯೋಗಿಯೊಂದಿಗೆ ಜಗಳ, ಹರಟೆ ಕಚೇರಿ ಸಮಯ ದಲ್ಲಿ ಅದು ನಿಮ್ಮ ವ್ಯಕ್ತಿತ್ವಕ್ಕೆ ಶೋಭೆ ನೀಡುವುದಿಲ್ಲ.
- ನಿಮ್ಮ ಮೇಲಸ್ಥರದವರಿರಲಿ ಅಥವಾ ಕೆಳಸ್ಥರದವರಾದರೂ ಸರಿಯೇ ಆದರ ಗೌರವಿಸುವುದನ್ನು ಕಲಿತುಕೊಳ್ಳಿ.
- ಗುಂಪಿನಲ್ಲಿ ಕೆಲಸ ಮಾಡುವುದನ್ನು ಕಲಿತುಕೊಳ್ಳಿ.
- ಅತಿಯಾದ ಬುದ್ಧಿವಂತಿಕೆ ಕೂಡ ಕೆಲವೊಮ್ಮೆ ನಿಮ್ಮನ್ನು ಪೇಚಿಗೆ ಸಿಲುಕಿಸುತ್ತದೆ. ಅಸಮಾಧಾನ ಉಂಟು ಮಾಡುತ್ತದೆ. ಆದ್ದರಿಂದ ನಿಮ್ಮ ಕೆಲಸದ ಮಿತಿಯನ್ನು ಅರಿತು ಮುಂದೆ ಸಾಗಿ.
- ನಿಮ್ಮ ಸಂವಹನ ಸಾಮರ್ಥ್ಯ ಉತ್ತಮವಾಗಿದ್ದಷ್ಟು ಒಳ್ಳೆಯದು. ಅದೂ ಒಂದು ಕಲೆಯೇ. ಅದನ್ನು ಕರಗತ ಮಾಡಿಕೊಳ್ಳಿ.
- ಎಲ್ಲವೂ ನಿಮ್ಮ ಮೂಗಿನ ನೇರಕ್ಕೆ ನಡೆಯಬೇಕು ಅನ್ನುವುದನ್ನು ಬಿಟ್ಟುಬಿಡಿ.
- ಸಕಾರಾತ್ಮಕ ವರ್ತನೆಯನ್ನು ರೂಢಿಸಿಕೊಳ್ಳಿ. ಸನ್ನಿವೇಶದ ಅರಿವಿಲ್ಲದೆ ನೀವು ಯಾವುದೇ ತೀರ್ಮಾನ ಕೈಗೊಳ್ಳಬೇಡಿ. ಆದರೆ ಅದಕ್ಕೆ ಪ್ರತಿಕ್ರಿಯಿಸಿ ಅಷ್ಟೆ.
- ಆಫೀಸ್ ರಾಜಕೀಯದಿಂದ ದೂರವಿರಿ. ಯಾರೋ ನಿಮ್ಮ ಬಗ್ಗೆ ತಪ್ಪು ಕಲ್ಪನೆ ಮೂಡಿಸಬಹುದು ಅಥವಾ ಗಾಸಿಪ್ ಉಂಟು ಮಾಡುವುದು ಒಳ್ಳೆಯ ಲಕ್ಷಣವಲ್ಲ.

# INTERVIEW

## ಆತ್ಮವಿಶ್ವಾಸವೇ ಸರ್ವಸ್ವ

ಪ್ರಶ್ನೆಗಳನ್ನು ಕೇಳುವ ಧಾಟಿಯಲ್ಲಿ ಸೌಮ್ಯತೆ ಮತ್ತು ಆಸಕ್ತಿಯಿರಲಿ. ಸ್ಪಷ್ಟವಾದ ಗುರಿ, ಸಾಧಿಸುವ ಛಲ ಮತ್ತು ಗೆಲ್ಲುವ ಆತ್ಮವಿಶ್ವಾಸವಿದ್ದರೆ, ಉಜ್ವಲ ಭವಿಷ್ಯ ನಿಮ್ಮದಾಗಬಲ್ಲದು.



ಅಚ್ಚುಕಟ್ಟಾದ ಬಯೋಡೇಟ ತಯಾರಿಸಿ ಉದ್ಯೋಗಕ್ಕೆ ಸೂಚಿಸಿರುವ ಅರ್ಹತೆ ನಿಮ್ಮಲ್ಲಿ ತಕ್ಕ ಮಟ್ಟಿಗಾದರೂ ಇದ್ದಲ್ಲಿ, ಸಂದರ್ಶನದ ಕರೆ ಖಚಿತ. ಈಗ ಉದ್ಯೋಗಾವಕಾಶಗಳು ಅಧಿಕವಾಗಿದ್ದರೂ, ಸೆಲೆಕ್ಷನ್ ಸ್ಪರ್ಧಾತ್ಮಕವಾಗಿರುತ್ತದೆ. ಹಾಗಾಗಿ, ಸಂದರ್ಶನದ ಆತಂಕ, ಭೀತಿ ಕಾಲೇಜಿನ ಮೋಜಿನ ದಿನಗಳನ್ನು ಮುಗಿಸಿ ವೃತ್ತಿಜೀವನಕ್ಕೆ ಕಾಲಿಡುತ್ತಿರುವ ವಿದ್ಯಾರ್ಥಿಗಳಿಗಷ್ಟೇ ಅಲ್ಲ; ಅನುಭವಿ ಅಭ್ಯರ್ಥಿಗಳಲ್ಲೂ ಇದೇ ಪಾಡು. ಸಂದರ್ಶನದ ಮೊದಲ ಮೂವತ್ತು ಸೆಕೆಂಡುಗಳಲ್ಲಿ ನುರಿತ ಸಂದರ್ಶಕರು ನಿಮ್ಮ ವ್ಯಕ್ತಿತ್ವದ ಅಂದಾಜು ಮಾಡುವ ಪರಿಣತಿ ಹೊಂದಿರುತ್ತಾರೆ. ಅನುಚಿತವಾದ ವೇಷಭೂಷಣ ಅಥವಾ ಕಂಪನಿ, ಉದ್ಯೋಗದ ಬಗ್ಗೆ ಮಾಹಿತಿಯೇ ಇಲ್ಲದಿರುವ ಅಭ್ಯರ್ಥಿಗಳು ತಕ್ಷಣವೇ ತಿರಸ್ಕೃತರಾಗುವುದರಲ್ಲಿ ಆಶ್ಚರ್ಯವೇನಿಲ್ಲ.

**ಪರಿಪೂರ್ಣ ತಯಾರಿ :** ನಿಮಗೆ ಉದ್ಯೋಗದ ಉತ್ಸುಕತೆಯಿರುವಂತೆ ಕಂಪನಿಯವರಿಗೂ ಉತ್ತಮ ಅಭ್ಯರ್ಥಿಗಳ ಅವಶ್ಯ ಇರುತ್ತದೆ. ಕಂಪನಿಯಲ್ಲಿನ ಅವಕಾಶ ಮತ್ತು ಸವಾಲುಗಳ ಕುರಿತು, ಕಂಪನಿಯ ದೂರದೃಷ್ಟಿ, ಬಂಡವಾಳ, ನೀತಿ-ನಿಯಮ, ಕಾರ್ಯಾಚರಣೆ, ಆಯವ್ಯಯ, ಉತ್ಪನ್ನಗಳ ವಿವರ, ಮಾರುಕಟ್ಟೆಯ ಪಾಲು ಇತ್ಯಾದಿಗಳ ಮಾಹಿತಿ ಸಂಗ್ರಹಿಸಿದರೆ ಆತ್ಮವಿಶ್ವಾಸ ಸ್ವಾಭಾವಿಕವಾಗಿಯೇ ಮೂಡುತ್ತದೆ. ಆದರೆ, ನಿಮ್ಮ ನಡೆನುಡಿಯಲ್ಲಿ ಈ ಆತ್ಮವಿಶ್ವಾಸ ಅಹಂಕಾರದಂತೆ ಕಾಣದಿರಲಿ.

**ಸ್ವಾಭಾವಿಕ ಆಂಗಿಕಭಾಷೆ :** ಸಂದರ್ಶಕರ ಮೇಲೆ ಅತಿಯಾದ ಪರಿಣಾಮ ಬೀರಲು ಹೋದರೆ ಎಡವಟ್ಟಾಗಬಹುದು. ನುರಿತ ಸಂದರ್ಶಕರು ನಿಮ್ಮ ಹಾವಭಾವಗಳಿಂದ ಆಲೋಚನೆಗಳನ್ನು ಅರಿಯಬಲ್ಲರು. ಆದ್ದರಿಂದ, ನಿಮ್ಮ ಬಾಡಿ ಲ್ಯಾಂಗ್ವೇಜ್, ಆಲೋಚನೆಗಳಿಗೂ ಸಾಮ್ಯತೆಯಿದ್ದು, ಉತ್ತರಗಳಲ್ಲಿ ಪ್ರಾಮಾಣಿಕತೆಯಿರಲಿ. ದೇಹದ ನಿಲುವು ಮತ್ತು ಚಲನೆ, ನಿಮ್ಮೊಳಗಿನ ಸಕಾರಾತ್ಮಕ ಆಲೋಚನೆಗಳಿಗೆ ಪೂರಕವಾಗಿರಲಿ.

**ಸಂದರ್ಶನದ ಕಾರ್ಯತಂತ್ರ:** ವೈಯಕ್ತಿಕ, ಉದ್ಯೋಗ ಮತ್ತು ಕೌಶಲ ಸಂಬಂಧಿತ ಪ್ರಶ್ನೆಗಳನ್ನು ಕೇಳುತ್ತಾ ಹೋಗುವುದು ಸಂದರ್ಶಕರ ಸಾಮಾನ್ಯ ಕಾರ್ಯತಂತ್ರ. ಉದಾಹರಣೆಗೆ, ನಿಮ್ಮ ಹವ್ಯಾಸಗಳೇನು ಎನ್ನುವ ಸಾಮಾನ್ಯ ಪ್ರಶ್ನೆಯ ಹಿಂದೆ ಅಡಕವಾಗಿರುವ ಉದ್ದೇಶ ನಿಮ್ಮಗ್ರಹಿಕೆಗೆ ಸಿಲುಕದಂತಿರಬಹುದು. ಇಂತಹ ಪ್ರಶ್ನೆಗಳನ್ನು ಉತ್ತರಿಸುತ್ತಾ ಹೋದಂತೆ, ಉತ್ತಮ ಹವ್ಯಾಸಗಳಿಲ್ಲದಿದ್ದರೆ, ನೀವು ಸೋಮಾರಿಯೆನ್ನುವ ಅಭಿಪ್ರಾಯ ಅಥವಾ ನಿಮ್ಮ ಕಾರ್ಯಕ್ಷಮತೆಯ ಬಗ್ಗೆ ನೀವೇ ಸಂದೇಹವನ್ನು ಮೂಡಿಸುವ ಸಾಧ್ಯತೆಗಳ ಬಗ್ಗೆ ಎಚ್ಚರವಿರಲಿ. ಹಾಗೆಯೇ, ಸಂದರ್ಶಕರು ಉದ್ದೇಶಪೂರ್ವಕವಾಗಿ ಊಹಿತ ಸನ್ನಿವೇಶಗಳನ್ನು ಸೃಷ್ಟಿಸಿ, ಒತ್ತಡದ ಪ್ರಶ್ನೆಗಳಿಂದ ಅಭ್ಯರ್ಥಿಗಳ ಪ್ರತಿಕ್ರಿಯೆ ಮತ್ತು ಪರಿಪಕ್ವತೆಯನ್ನು ಗಮನಿಸುತ್ತಾರೆ. ಒತ್ತಡ ತರುವ ಪ್ರಶ್ನೆಗಳಿಂದ ಕಂಗಾಲಾಗದೆ, ಆತ್ಮವಿಶ್ವಾಸದಿಂದ ಉತ್ತರಿಸಿದರೆ, ನಿಮ್ಮ ವ್ಯಕ್ತಿತ್ವದ ಪ್ರೌಢತೆಯಿಂದ ಸಂದರ್ಶಕರ ಮೇಲೆ ಪ್ರಭಾವ ಬೀರಬಹುದು.

**ಸಂದರ್ಶಕರ ಪ್ರಶ್ನೆಗಳು:** ನಿಮ್ಮ ಕೌಟುಂಬಿಕ ಹಿನ್ನೆಲೆ, ಸಾಮರ್ಥ್ಯ ಮತ್ತು ದೌರ್ಬಲ್ಯಗಳು, ವ್ಯಕ್ತಿತ್ವದಲ್ಲಿನ ಸುಧಾರಣೆ, ಜೀವನದ ಧ್ಯೇಯ ಮತ್ತು ಸಾಧಿಸುವ ಮಾರ್ಗ, ಉದ್ಯೋಗದಲ್ಲಿನ ನಿರೀಕ್ಷೆ ಇತ್ಯಾದಿಗಳನ್ನು ಅವಲಂಬಿಸುತ್ತದೆ. ಇಂತಹ ಪ್ರಶ್ನೆಗಳನ್ನು ನಿರೀಕ್ಷಿಸಿ, ಸೂಕ್ತವಾಗಿ ಉತ್ತರಿಸಿ.

**ಅಭ್ಯರ್ಥಿಗಳ ಪ್ರಶ್ನೆಗಳು:** ಅಂತಿಮ ಘಟ್ಟದಲ್ಲಿ ಪ್ರಶ್ನೆಗಳೇನಾದರೂ ಇವೆಯೇ ಎಂದು ಸಂದರ್ಶಕರು ಕೇಳಿದಾಗ, ಸಮಯೋಚಿತವಾಗಿ ಜಾಣತನದ ಪ್ರಶ್ನೆಗಳನ್ನು ಕೇಳುವುದರಿಂದ ನಿಮ್ಮ ವ್ಯಕ್ತಿತ್ವದ ಬೇರೊಂದು ದೃಷ್ಟಿಕೋನವನ್ನು ಪರಿಚಯಿಸಿ, ನಿಮ್ಮ ಆಯ್ಕೆ ಖಚಿತವಾಗುವಂತೆ ಮಾಡಬಹುದು. ನೀವು ಕೇಳಬಹುದಾದ ಪ್ರಶ್ನೆಗಳು ತರಬೇತಿ, ವೈಯಕ್ತಿಕ ಬೆಳವಣಿಗೆ ಮತ್ತು ಪ್ರಗತಿ, ಮಾರಾಟ ಪ್ರಕ್ರಿಯೆ, ಗ್ರಾಹಕರ ಆಸಕ್ತಿ ಮತ್ತು ಅಭಿರುಚಿ, ತಂತ್ರಜ್ಞಾನ ಇತ್ಯಾದಿಗಳ ಕುರಿತಾಗಿರಲಿ. ಪ್ರಶ್ನೆಗಳನ್ನು ಕೇಳುವ ಧಾಟಿಯಲ್ಲಿ ಸೌಮ್ಯತೆ ಮತ್ತು ಆಸಕ್ತಿಯಿರಲಿ. ಸ್ಪಷ್ಟವಾದ ಗುರಿ, ಸಾಧಿಸುವ ಛಲ ಮತ್ತು ಗೆಲ್ಲುವ ಆತ್ಮವಿಶ್ವಾಸವಿದ್ದರೆ, ಉಜ್ವಲ ಭವಿಷ್ಯ ನಿಮ್ಮದಾಗಬಲ್ಲದು.

■ವಿ.ಪ್ರದೀಪ್ ಕುಮಾರ್

### ಸಂದರ್ಶನದ ಸೂತ್ರಗಳು

- ಕಂಪನಿ ಮತ್ತು ಉದ್ಯೋಗದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ.
- ಆಡಂಬರವಿಲ್ಲದ ವೇಷಭೂಷಣ ಅಚ್ಚುಕಟ್ಟಾಗಿರಲಿ; ಆಭರಣ, ಪರಿಮಳದ ಬಳಕೆಯಲ್ಲಿ ಮಿತಿಯಿರಲಿ; ಮುಗುಳ್ನಗೆಯಿರಲಿ.
- ಪ್ರಶ್ನೆಗಳನ್ನು ನಿರೀಕ್ಷಿಸಿ; ಪ್ರಾಮಾಣಿಕವಾಗಿ, ಆತ್ಮವಿಶ್ವಾಸದಿಂದ ಉತ್ತರಿಸಿ.
- ಶೈಕ್ಷಣಿಕ, ಉದ್ಯೋಗ ಮತ್ತು ಸಾಮಾನ್ಯ ಜ್ಞಾನ ಪ್ರಸ್ತುತವಿರಲಿ.
- ಸ್ಥಳದಲ್ಲೇ ನೇಮಕವಾದರೆ, ಉದ್ಯೋಗವನ್ನು ಸ್ವೀಕರಿಸುವ ಮುನ್ನ ನಿಯಮ-ನಿಬಂಧನೆಗಳನ್ನು ಅರಿಯಿರಿ.